**ಇಂದು ನಿನ್ನೆಯಲ್ಲಿಯೇ ಎಷ್ಟು ವ್ಯತ್ಯಾಸ ಎನಿಸಿತು ಅವಳಿಗೆ. ನಿನ್ನೆ ಚಿಂತೆ ಚಿತ್ತಕಲಕಿ ನಿದ್ದೆ ಕೆಡಿಸಿದ್ದರೆ ಇಂದು ಸಂತಸದ ಅಲೆ ರೆಪ್ಪೆಗಳ ನಡುವೆ ನಿಂತುಬಿಟ್ಟಿದೆ. ಅಂತರಂಗ ದಲ್ಲಿ ಅರಿಯದ ಭಾವಗಳ ಕಚಗುಳಿ, ತನಗೆ ಇಂದೇನಾ ಗಿದೆ ಎಂದು ಯೋಚಿಸಿದಳು. ಈ ನಡುವೆ ಉತ್ಸಾಹವೇ ಸತ್ತ ಎದೆಯಲ್ಲಿ ಲವಲವಿಕೆ ಮಿಸುಕಾಡುತ್ತಿದೆ. ಬೆಳಗಿನಿಂದ ನಡೆದುದನ್ನೆಲ್ಲ ಒಮ್ಮೆ ನೆನೆದಳು. ಸಂಜೆಯವರೆಗೂ ಅಂಥದೇನೂ ನಡೆದಿರಲಿಲ್ಲ.**

'ಯಾಕೆ ಹಾಗಂತೀರಿ? ನನ್ನಲ್ಲೇನೋ ದೋಷ ಇರಬೌದು, ಡಿ ಅಂಡ್ ಸಿ, ಅದೂ ಇದೂ ಏನೇನೋ ಮಾಡಿಸಿಕೊಂಡ ಮೇಲೆ ಎಷ್ಟೋ ಜನಕ್ಕೆ ಆಗುತ್ತವೆ. ನನಗೂ ಹಾಗೇನಾದ್ರೂ ಇರಬೌದು ತೋರ್‍ಸಿದ್ರೆ ತಪ್ಪೇನು?'

ಅದೇ ರಬ್ಬರ್ ಸ್ಟಾಂಪಿನ ಮುಖವಾಡದಲ್ಲಿ ನುಡಿದ ಕಾರ್ತಿಕ್... 'ಇಲ್ಲ ಕವೀ. ನೀನು ಚೆನ್ನಾಗಿದ್ದಿ. ದೋಷ ಇರೋದು ನನ್ನ ಹತ್ತಿರವೇ...'

ಕವಿತಾ ಧಡಕ್ಕನೆ ಎದ್ದು ನಿಂತಳು. 'ಏನ್ಹೇಳ್ತಾ ಇದ್ದೀರಿ ನೀವು ಮುತ್ತಿನ ಮಣಿಯಂಥ ಮೂರು ಮಕ್ಕಳಾಗಿವೆ. ಆವಾಗ ಇಲ್ದೇ ಇದ್ದ ದೋಷ ಇಗೆಲ್ಲಿಂದ ಬಂತು?'

ಅವನು ಕುಳಿತಲ್ಲಿಯೇ ಮಿಸುಕಾಡಿದ್ದ. 'ನೋಡು ಕವಿತಾ, ನಮಗೆ ಮೂರು ಮಕ್ಕಳಾದ ನಂತರ ನಿನ್ನಕ್ಕನಿಗೇ ಬರ್ತ್ ಕಂಟ್ರೋಲ್ ಆಪರೇಷನ್ ಮಾಡಿಸಬೇಕೆಂದರೆ ಅವಳು ಹೆದರಿಕೊಂಡು ಬೇಡವೇ ಬೇಡವೆಂದು ಬಿಟ್ಟಳು. ನಮ್ಮ ಸಂಸಾರದ ಸುಖಕ್ಕಾಗಿ ಅನಂತರ ನಾನೇ ಅವಳಿಗೆ ತಿಳಿಯದಂತೆ ಆಪರೇಷನ್ ಮಾಡಿಸ್ಕೊಂಡೆ. ಅದಾದ ವರ್ಷದ ನಂತರ ನಿನ್ನಕ್ಕ ತೀರಿಕೊಂಡದ್ದು...' ಮುಂದಿನ ಮಾತು ಅವಳಿಗೆ ಕೇಳಿಸಲೇ ಇಲ್ಲ. ನಿಂತಲ್ಲೇ ವಿಗ್ರಹವಾದಳು. ಕೆಲನಿಮಿಷ ನಂತರ ಕುಸಿದು ಕುಳಿತು ತೀರ ನಿಸ್ಸತ್ವವಾದ ದನಿಯಲ್ಲಿ ಕೇಳಿದ್ದಳು:

'ಹಾಗಾದ್ರೆ, ನನ್ನನ್ನು ಯಾತಕ್ಕೆ ಮದುವೆ ಮಾಡ್ಕೊಂಡ್ರಿ?'

'ನಿನ್ನಕ್ಕ ಸಾಯುವ ಮುನ್ನ ಯಾವುದಕ್ಕೂ ಆಸ್ಪದ ಕೊಡದೆ ನಿನ್ನ ಕೈಯನ್ನು ನನ್ನ ಕೈಯಲ್ಲಿಟ್ಟಳು. ನಿನ್ನ ತಾಯಿ ತಂದೆಯರಿಗೂ ನೀನು ನಮ್ಮ ಮಕ್ಕಳ ತಾಯಿಯಾಗಬೇಕೆಂಬ ಆಸೆಯಿತ್ತು...'

ಕವಿತಾಳ ರೋಷ ನಿರಾಸೆ. ದುಃಖಗಳೆಲ್ಲ ಆಸ್ಫೋಟಿಸಿದವು.

'ನೀವು ಹೀಗೆ ವಂಚನೆ ಮಾಡ್ಬಾರ್ದಿತ್ತು ಕಾರ್ತಿಕ್, ಕನಿಷ್ಠ ನನಗಾದರೂ ತಿಳಿಸಬೇಕಾಗಿತ್ತು' ಹೃದಯವೇ ಕಿತ್ತುಬರುವಂತೆ ಬಿಕ್ಕಳಿಸಿದಳು. 'ನೋಡು ಕವಿತಾ ನನ್ನಿಂದ ತಪ್ಪಾಯ್ತು. ನನ್ನ ಜೊತೆಲಿದ್ರೆ ನಿನಗೆ ಈ ಜನ್ಮದಲ್ಲಿ ಮಕ್ಕಳಾಗೋದಿಲ್ಲ. ಹಾಗೆ ಮಕ್ಕಳು ಬೇಕೇ ಬೇಕೂಂತಿದ್ರೆ ನಿನಗೆ ಡೈವೋರ್ಸ್ ಕೊಡ್ತೀನಿ. ಬೇರೆ ಮದ್ವೆ ಮಾಡ್ಕೊ. ಮಕ್ಕಳಾಗುತ್ತವೆ.'

ಅವಳಿಂದ ಅಲ್ಲಿ ಕುಳಿತುಕೊಳ್ಳಲು ಆಗಲೇ ಇಲ್ಲ. ತಲೆ ಚಚ್ಚಿಕೊಳ್ಳಬೇಕೆನಿಸಿತು. ಹೃದಯ